## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC**-94/2024 **PW**: 1

**ದಿಃ 13.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎನ್ ಪಿ ವಕೀಲರಿಂದಃ**

1. ಸದರಿ ಅರ್ಜಿಯನ್ನು ನೀವು ಯಾವ ಕಾರಣಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ನಾನು ಅಪಘಾತದ ಸಂಬಂದ ಪರಿಹಾರ ಕೋರಿ ಈ ಅರ್ಜಿ ಸಲ್ಲಿಸಿರುತ್ತೇನೆ. ಅಪಘಾತದ ಸಮಯದಲ್ಲಿ ನನ್ನ ವಯಸ್ಸು 21 ವರ್ಷ ಆಗಿತ್ತು. ಅಪಘಾತದ ಸಮಯದಲ್ಲಿ ನಾನು ಚಲಾಯಿಸುತ್ತಿದ್ದ ವಾಹನ ರಾಯಲ ಎನಪೀಲ್ಡ ಹಿಮಾಲಯ. ಸದರಿ ವಾಹನ ಎರಡು ಚಕ್ರದ ವಾಹನ ಎಂದರೆ ಸರಿ. ಸದರಿ ವಾಹನದ ಎಂಜಿನ ಕೆಪಾಸಿಟಿ 411 ಸಿಸಿ ಇತ್ತು. ಸದರಿ ವಾಹನದ ಟಾಪ ಸ್ಪೀಡ ಬರುತ್ತದೆಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಬೈಕನ್ನು ಅಪಘಾತವಾದ ಸಮಯದ ಎರಡು ವರ್ಷಗಳ ಹಿಂದಿನಿಂದ ಚಾಲನೆ ಮಾಡುತ್ತಿದ್ದೇನು. ಸದರಿ ಬಗ್ಯೆಕನ ಟಾಪ ಸ್ಪೀಡ 200 ಕಿ. ಮೀಟರ ಇದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನಗೆ ಬೈಕನ ಬಗ್ಗೆ ಬೇರೆ ವಾಹನಗಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. 411 ಸಿಸಿ ಕೆಪಾಸಿಟಿ ಇರುವ ವಾಹನ ಸುಮಾರು 95 ರಿಂದ 100 ವರೆಗೂ ಓಡಿಸಬಹುದು. ಸದರಿ ಬೈಕು ಅಡ್ವೆಂಚರ್ಸ ಬೈಕ ಆಗಿದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ವಾಹನವನ್ನು ನೀವು ತೆಗೆದುಕೊಳ್ಳಬೇಕಾದರೆ ಎಷ್ಟು ಬೆಲೆ ಇತ್ತು ಎಂದರೆ ಸಾಕ್ಷಿ 2,30,000/- ಇರಬಹುದು ಎನ್ನುತ್ತಾರೆ.

2. ಅಪಘಾತವಾದ ದಿನಾಂಕಃ02.03.2023 ಆಗಿತ್ತು. ಸಮಯ ಸಂಜೆ 5.30 ರಿಂದ 6.00 ಗಂಟೆ ಇರಬಹುದು. ಸಂಜೆ 5.30 ರಿಂದ 6.00 ಗಂಟೆ ಸಮಯ ಸಾಮಾನ್ಯವಾಗಿ ಮಬ್ಬು ಕತ್ತಲು ಇರುತ್ತದೆಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಬೈಕಗೆ ವಿಮೆ ಇತ್ತು. ನಾನು ಈಗ ಯಾವದೇ ಉದ್ಯೋಗ ಮಾಡುತ್ತಿಲ್ಲ. ಮೊದಲು ನಾನು ವಿದ್ಯಾರ್ಥಿ ಇದ್ದೆ. ಅಪಘಾತವಾದ ನಂತರ ಪೊಲೀಸರು ನನ್ನ ಮೇಲೆ ಕೇಸು ದಾಖಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈ ಹಂತದಲ್ಲಿ ಸಿಸಿ ನಂಃ3146/2023 ರ ಆಜ್ಞಾಪಕದ ದೃಡೀಕೃತ ನಕಲು ತೋರಿಸಿದಾಗ ಸಾಕ್ಷಿ ಅದರಲ್ಲಿರುವ ಆರೋಪಿ ನಂಬರಃ1 ರವರ ಹೆಸರು ನನ್ನದು ಎಂದು ಒಪ್ಪಿಕೊಂಡಿರುತ್ತಾರೆ. ಆ ಕಾರಣಕ್ಕೆ ಸದರಿ ದಾಖಲೆಯನ್ನು ನಿಆರ್ 1 ಎಂದು ಗುರುತಿಸಲಾಯಿತು. ಸದರಿ ದಾಖಲೆ ಪ್ರಕಾರ ನಾನು ನ್ಯಾಯಾಲಯದಲ್ಲಿ

ದಂಡ ಕಟ್ಟಿ ಕೇಸು ಮುಕ್ತಾಯ ಗೊಳಿಸಿಕೊಂಡಿರುತ್ತೇನೆಂದರೆ ಸರಿ. ಅಪಘಾತವಾದ ಸಮಯದಲ್ಲಿ ನಾನು ಆಕ್ಸಫರ್ಡ ಕಾಲೇಜನಿಂದ ಗೋಕುಲ ರೋಡ ಬಳಿ ಹೋಗುತ್ತಿದ್ದೆ. ಸದರಿ ರಸ್ತೆ ಚತುಸ್ಪಥ ರಸ್ತೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ಎದುರುದಾರ ರಸ್ತೆಯನ್ನು ದಾಟುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಅಪಘಾತವಾದ ಸ್ಥಳ ಇದೇನಾ ಎಂದು ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಆರ್ 2 ಎಂದು ಗುರುತಿಸಲಾಯಿತು. ಸಾಕ್ಷಿ ಈ ಹಂತದಲ್ಲಿ ಮತ್ತೊಂದು ಭಾವಚಿತ್ರದ ದೃಡೀಕೃತ ನಕಲನ್ನು ತೋರಿಸಿ ಪೋಟೋದಲ್ಲಿ ನಿಂತಿರುವ ವಾಹನ ನಿಮ್ಮದಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಆರ್ 3 ಎಂದು ಗುರುತಿಸಲಾಯಿತು. ನಿಆರ್ 3 ರಲ್ಲಿ ಕೆಳಗೆಡೆ ಬಿದ್ದಿರುವ ಬೈಕಗೆ ನಾನು ಡಿಕ್ಕಿ ಹೊಡೆದಿದ್ದು ಎಂದರೆ ಸಾಕ್ಷಿ ಅವರೇ ಬಂದು ನನಗೆ ಡಿಕ್ಕಿ ಹೊಡೆದಿರುತ್ತಾರೆ ಎನ್ನುತ್ತಾರೆ.

3. ನೀವು ನಿಮ್ಮ ಅರ್ಜಿಯ 6ನೇ ಕಾಲಂನಲ್ಲಿ ನಾನು ಒಂದು ತಿಂಗಳಿಗೆ 50 ಸಾವಿರ ರೂ ಗಳನ್ನು ದುಡಿಯಬಹುದಿತ್ತು ಒಂದು ವೇಳೆ ನಾನು ಶಾಶ್ವತವಾಗಿ ಅಂಗನ್ಯೂನತೆ ಹೊಂದದೇ ಇದ್ದರೆ ಎಂದು ಬರೆಸಿದ್ದು ಈ ಬಗ್ಗೆ ನೀವು ಶಾಶ್ವತ ಅಂಗನ್ಯೂನತಾ ಪ್ರಮಾಣ ಪತ್ರ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನೇ ಅತೀವೇಗ ಮತ್ತು ಅಜಾಗೂರಕತೆಯಿಂದ ನನ್ನ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿ ಎದುರುದಾರ ಬರುತ್ತಿದ್ದ ಬೈಕಗೆ ಡಿಕ್ಕಿ ಹೊಡೆಸಿ ಅವರಿಗೆ ಗಾಯ ಉಂಟು ಮಾಡಿ ನಂತರ ಅವರ ಮೇಲೆ ಸುಳ್ಳು ಕೇಸು ದಾಖಲಿಸಿದ್ದೇನೆಂದರೆ ಸರಿಯಲ್ಲ. ನನಗೆ ಯಾವದೇ ರೀತಿಯ ಗಾಯ ಆಗಿಲ್ಲ ಎಂದರೆ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ನಿಆರ್ 3 ರಲ್ಲಿ ಕೆಳಗೆ ಬಿದ್ದಿರುವ ಬೈಕನ ಎಂಜಿನ ಸಿ ಸಿ ಎಷ್ಟು ಇದೆ ಎಂದು ಹೇಳಲು ಆಗುತ್ತದೆಯಾ ಎಂದೆರೆ ಸಾಕ್ಷಿ ಹೇಳಲು ಆಗುವದಿಲ್ಲ ಎನ್ನುತ್ತಾರೆ. ಬಿದ್ದಿರುವ ಗಾಡಿ ಮೊಪೆಡ್ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದರ ಟಾಪ ಸ್ಪೀಡ ಬಂದು 50 ರಿಂದ 60 ಕಿ ಮೀಟರ ಅಷ್ಟೇ ಇರುತ್ತದೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಎದುರುದಾರನಿಗೆ ಅಂದರೆ ಬೈಕನ್ನು ಚಲಾಯಿಸುತ್ತಿದ್ದ ವ್ಯಕ್ತಿಗೆ ಬೇರೆ ನ್ಯಾಯಾಲಯದಿಂದ ಪರಿಹಾರ ಸಿಕ್ಕಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಪರಿಹಾರ ಬರಲೆಂಬ ಉದ್ದೇಶದಿಂದ ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.